ಕರ್ನಾಟಕ ವಿಧಾನಸಭೆ

ಗುರುವಾರ 21ನೇ ಜುಲೈ 2005 ರಂದು

ಸದನವು ವಿಧಾನಸೌಧದಲ್ಲಿರುವ ವಿಧಾನಸಭೆಯ ಸಭಾಂಗಣದಲ್ಲಿ

ಬೆಳಿಗ್ಗೆ 10ಗಂಟೆ 13ನಿಮಿಷಕ್ಕೆ ಸಮಾವೇಶಗೊಂಡಿತು.

ಅಧ್ಯಕ್ಷರು (ಶ್ರೀ ಕೃಷ್ಣರವರು) ಅಧ್ಯಕ್ಷ ಪೀಠವನ್ನು ಅಲಂಕರಿಸಿದರು.

ಅಧ್ಯಕ್ಷರು:– ಈಗ ಬಹಳ ದಿವಸದಿಂದ ಶೂನ್ಯವೇಳೆಗೆ ನಾನು ಅವಕಾಶ ಕೊಟ್ಟಿಲ್ಲ. ಬಹಳ ಜನ ಅವಕಾಶ ಕೇಳಿದ್ದಾರೆ. ತಡೆಯಿರಿ.

1.ಅಧ್ಯಕ್ಷರ ಅಪ್ಪಣೆ ಮೇರೆಗೆ

ವಿಷಯ:– ಪ್ರಶ್ನೋತ್ತರವನ್ನು ತೆಗೆದುಕೊಳ್ಳುವ ಬಗ್ಗೆ.

ಶ್ರೀ ಜಿ. ವಿ. ಶ್ರೀರಾಮರೆಡ್ಡಿ:– ಪ್ರಶ್ನೋತ್ತರ ಆಗಬೇಕು.

ಶ್ರೀ ಜೆ. ಸಿ. ಮಾದುಸ್ವಾಮಿ:– ಯಾರೂ ಇಲ್ಲ ಎಂದು ನೀವು ಶೂನ್ಯವೇಳೆಗೆ ಅವಕಾಶ ಕೊಟ್ಟರೆ ಹೇಗೆ ಸ್ವಾಮಿ?

ಅಧ್ಯಕ್ಷರು:– ಆಯಿತು ದಯಮಾಡಿ ಸಹಕರಿಸಿ.

ಶ್ರೀ ಜೆ. ಸಿ. ಮಾಧುಸ್ವಾಮಿ:– ಮಂತ್ರಿಗಳು ಬರಲಿಲ್ಲ ಎಂದು ಕ್ವೊಶ್ಚನ್ ಅವರ್ ಮಾಡದೇ ಶೂನ್ಯವೇಳೆಗೆ ಅವಕಾಶ ಕೊಡುತ್ತಿದ್ದೀರಲ್ಲಾ.

ಶ್ರೀ ಜಿ. ವಿ. ಶ್ರೀರಾಮರೆಡ್ಡಿ:– ನಿನ್ನೇನೂ ಪ್ರಶ್ನೋತ್ತರ ಇಲ್ಲ.

ಶ್ರೀ ಜೆ. ಸಿ. ಮಾದುಸ್ವಾಮಿ:– ಕ್ವೊಶ್ಚನ್ ಅವರ್ ಇಲ್ಲದೇ ಯಾರಾದರೂ ಶೂನ್ಯ ವೇಳೆ ತೆಗೆದುಕೊಳ್ಳುತ್ತಾರಾ ಸಾರ್?

ಶ್ರೀ ಜಿ. ವಿ. ಶ್ರೀರಾಮ ರೆಡ್ಡಿ:– ನಿನ್ನೇನೂ ಪ್ರಶ್ನೋತ್ತರ ಆಗಲಿಲ್ಲ. ಇವತ್ತೂ ಪ್ರಶ್ನೋತ್ತರ ಬೇಡ ಶೂನ್ಯ ವೇಳೆ ಎಂದು ಹೇಳಿಬಿಟ್ಟರೆ...

ಅಧ್ಯಕ್ಷರು:– ಈಗ ಕೇಳಿರಿ..

ಶ್ರೀ ಜೆ. ಸಿ. ಮಾದುಸ್ವಾಮಿ:– ಶೂನ್ಯವೇಳೆ ಯಾವಾಗ ತೆಗೆದುಕೊಳ್ಳಬೇಕು? ಶುರು ಆದ ತಕ್ಷಣ ಶೂನ್ಯವೇಳೆ ಸ್ಟಾರ್ಟ್ ಆಗುತ್ತದಾ? ಆಷಾಡ ಆದ ಮೇಲೆ ಶೂನ್ಯ ಬರಬೇಕು.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ:– ವಿತ್ತೀಯ ಕಾರ್ಯಕಲಾಪಗಳನ್ನು ತಾವು ಅಜೆಂಡಾದಲ್ಲಿ ಹಾಕಿದ್ದೀರಿ.

ಅಧ್ಯಕ್ಷರು:– ಹೌದು.. ಹಾಕಿದ್ದೇನೆ.

ಶ್ರೀ ಜೆ. ಸಿ. ಮಾದುಸ್ವಾಮಿ:– ಅವರು ಇಲ್ಲ ಎಂದು ಶೂನ್ಯವೇಳೆ ತೆಗೆದುಕೊಳ್ಳುತ್ತಿದ್ದೀರಲ್ಲಾ.

ಅಧ್ಯಕ್ಷರು:– ಬೇಡಿಕೆಯ ಮಂಡಿಸಬೇಕು ಎಂದರೆ ಆಯಾಯ ಮಂತ್ರಿಗಳು ಮಂಡಿಸಬೇಕು ಎಂದಲ್ಲ ಬೇರೆಯವರೂ ಮಂಡಿಸಬಹುದು. ಅದನ್ನೇ ತೆಗೆದುಕೊಳ್ಳೋಣ ಎಂದರೆ ತೆಗೆದುಕೊಳ್ಳೋಣ.

ಶ್ರೀ ಜೆ. ಸಿ. ಮಾದುಸ್ವಾಮಿ:– ಕ್ವೊಶ್ಚನ್ ಅವರ್ ತೆಗೆದುಕೊಳ್ಳಿ ಇಲ್ಲ ಎಂದರೆ ಬೇಡಿಕೆ ತೆಗೆದುಕೊಳ್ಳಿ.

ಶ್ರೀ ಕೆ. ಎಸ್. ಈಶ್ವರಪ್ಪ:– ಆಕ್ಚುಯಲಿ ಈಗ ನೀವು ಗಮನಿಸಿ. ಇಡೀ ವಿಧಾನಸಭೆ ಶಾಸನ ಆರಂಭ ಆದಾಗಿನಿಂದ ಕೂಡ ಸಂಬಂಧಪಟ್ಟ ಮಂತ್ರಿಗಳು ಯಾರೂ ಇರುವುದಿಲ್ಲ. ಹಾಗಾಗಿ ಈ ಸೆಷನ್ನೇ ಶೂನ್ಯ ಸೆಷನ್ ಆಗಿ ಹೋಗಿದೆ. ಇಡೀ ಸೆಷನ್ನೇ ಶೂನ್ಯ. ಅವರೆಲ್ಲಾ ಬಂದ ಮೇಲೆ ಮಾಡಿ.

ಅಧ್ಯಕ್ಷರು:– ಅವರು ಇಲ್ಲ ಎಂದು ಹೇಳುವುದು ಬೇಡ.

ಶ್ರೀ ಕೆ. ಎಸ್. ಈಶ್ವರಪ್ಪ:– ಮಂತ್ರಿಗಳೆಲ್ಲಾ ಬಂದ ಮೇಲೆ ಸೆಷನ್ ಕರೆಯುವಂತಹ ಅಭ್ಯಾಸವನ್ನು ಮಾಡಿಸಿ.

ಶ್ರೀ ಜಿ. ವಿ. ಶ್ರೀರಾಮರೆಡ್ಡಿ:– ನಾವು ನಿಲುವಳಿ ಸೂಚನೆ ಕೊಟ್ಟಾಗ, ಪ್ರಶ್ನೋತ್ತರ ತೆಗೆದುಕೊಳ್ಳುತ್ತೇವೆ. ನಿಲುವಳಿ ಸೂಚನೆ ತೆಗೆದುಕೊಳ್ಳುವುದಕ್ಕೆ ಆಗುವುದಿಲ್ಲ ಎಂದು ಹೇಳುತ್ತೀರಿ. ಈಗ ಮಾತ್ರ ಪ್ರಶ್ನೋತ್ತರ ಬೇಡ, ಶೂನ್ಯ ವೇಳೆ ತೆಗೆದುಕೊಳ್ಳೋಣವೆಂದರೆ ಅದು ಹೇಗೆ ಸಾರ್?

ಅಧ್ಯಕ್ಷರು:– ಪ್ರಶ್ನೋತ್ತರಕ್ಕೆ ಸಚಿವರುಗಳು ಬರಬೇಕಾಗಿದೆ. ಬೇಡಿಕೆಯ ಮೇಲೆ ಚರ್ಚೆ ಮಾಡೋಣ. ಬೇಡಿಕೆಯ ಮೇಲೆ ಬೇರೆಯವರೂ ಮಂಡಿಸುವುದಕ್ಕೆ ಅವಕಾಶ ಇದೆ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ:– ಅಧ್ಯಕ್ಷರೆ, ಬೇಡಿಕೆಗಳನ್ನು ಮಂಡಿಸುವುದಕ್ಕೂ ಮಂತ್ರಿಗಳು ಇಲ್ಲ.

ಅಧ್ಯಕ್ಷರು:– ಬೇರೆಯವರು ಮಂಡಿಸಬಹುದು, ಅದಕ್ಕೇನಂತೆ, ಸಂಬಂಧಪಟ್ಟವರೇ ಮಂಡಿಸಬೇಕು ಎಂದೇನಿಲ್ಲ.

ಶ್ರೀ ಜಿ. ವಿ. ಶ್ರೀರಾಮರೆಡ್ಡಿ:– ದಯವಿಟ್ಟು ಪ್ರಶ್ನೋತ್ತರ ತೆಗೆದುಕೊಳ್ಳಿ.

ಶ್ರೀ ಜೆ. ಸಿ. ಮಾದುಸ್ವಾಮಿ:– ಕ್ವೊಶ್ಚನ್ ಅವರ್ ತೆಗೆದುಕೊಳ್ಳಿ ಅಥವಾ ಡಿಮ್ಯಾಂಡ್ ಸ್ಟಾರ್ಟ್ ಮಾಡಬೇಕು.

ಅಧ್ಯಕ್ಷರು:– ಡಿಮ್ಯಾಂಡ್ ಸ್ಟಾರ್ಟ್ ಮಾಡೋಣ.

ಶ್ರೀ ಜಿ. ವಿ. ಶ್ರೀರಾಮರೆಡ್ಡಿ:– ಮಂತ್ರಿಗಳೇ ಇಲ್ಲ. 20 ಜನ ಇರಬೇಕು.

ಅಧ್ಯಕ್ಷರು:– ಈಗ ದಯಮಾಡಿ ಕೇಳಿ. ಆಯಾಯ ಸಚಿವರೇ ಮಂಡಿಸಬೇಕು ಎಂದೇನಿಲ್ಲ. ಮಂಡಿಸಿ ಆದ ಮೇಲೆ ಚರ್ಚೆಗೆ ಬರುತ್ತಾರೆ. ದಯಮಾಡಿ ಸಹಕರಿಸಿ.

ಶ್ರೀ ಎಂ. ಪಿ. ಪ್ರಕಾಶ್ (ಮಾನ್ಯ ಕಂದಾಯ ಹಾಗೂ ಸಂಸದೀಯ ವ್ಯವಹಾರಗಳ ಸಚಿವರು):– ಮಾನ್ಯ ಅಧ್ಯಕ್ಷರೆ, ಮಾನ್ಯ ಎಲ್ಲಾ ಹಿರಿಯ ಶಾಸಕರು ಹೇಳಿದಂತೆ ಈಗ ನಾವು ಬೇಡಿಕೆಯನ್ನು ಪ್ರಾರಂಭ ಮಾಡುವುದಾಗಿದ್ದರೆ ಇವತ್ತಿನ ದಿವಸ ಸುಮಾರು 14 ಇಲಾಖೆಗಳ ಬಗ್ಗೆ ಇದೆ. ಈಗ ಇಷ್ಟು ಬೇಡಿಕೆಗಳನ್ನು ಒಂದೇ ಸಲ ಮಂಡಿಸುವುದು ಬಹಳ ಕಷ್ಟ. ಎಲ್ಲರೂ ಮಾತನಾಡುವುದಕ್ಕೆ ಆಗುವುದಿಲ್ಲ. ಆದ್ದರಿಂದ ಕಂದಾಯ ಇಲಾಖೆ ಇದೆ. ಆರೋಗ್ಯ ಇಲಾಖೆ ಇದೆ. ನಾವು ಇಲ್ಲಿ ಬಂದಿರತಕ್ಕ ಮಂತ್ರಿಗಳು ನಮ್ಮ ನಮ್ಮ ಬೇಡಿಕೆಗಳನ್ನು ಇಡುತ್ತೇವೆ. ಅಷ್ಟಕ್ಕೆ ಸೀಮಿತಗೊಳಿಸಿ ತಾವು ಕಾರ್ಯ ಪ್ರಾರಂಭ ಮಾಡಬಹುದು. ಆದ್ದರಿಂದ ಎಲ್ಲರಿಗೂ ಕೂಡ ಒಳ್ಳೆಯದಾಗುತ್ತದೆ. ಅಮೇಲೆ ಉಳಿದುದ್ದನ್ನು ನಾವು ನೋಡಿಕೊಳ್ಳೋಣ.

ಅಧ್ಯಕ್ಷರು:– ಆಯಿತು. ಬಂದಿರತಕ್ಕಂಥ ಸಚಿವರು ಮಂಡನೆ ಮಾಡಿ.